**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 999/2022**

| | | | |
|---|---|---|---|
| **ಹೆಸರು** | **:** | **ಗುರುಲಿಂಗಪ್ಪ** | **ಚಾ.ಸಾ.1** |
| **ತಂದೆಯ ಹೆಸರು** | **:** | **ಗುರುಬಸಪ್ಪ** | **ಪ್ರಾ.ಸಾ.1** |
| **ವಯಸ್ಸು** | **:** | **72 ವರ್ಷ** | **ದಿನಾಂಕಃ 18-04-2024** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ಮಹಗಾಂವ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2014 ರಿಂದ 2018 ರ ವರೆಗೆ ನಿಸಾ ಕಂಪನಿಯಲ್ಲಿ ಸುಪ್ರವೈಸರ ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 02-10-2016 ರಂದು ಕೋರವಿ ಎರಟೈಲ ಟವರದಲ್ಲಿ 24 ಬ್ಯಾಟರಿ ಸೇಲಗಳು ಕಳ್ಳತನವಾಗಿದೆ ಎಂದು ಚಾಸಾ-4 ರವರು ನನಗೆ ತಿಳಿಸಿದ್ದರು. ಅದೇ ದಿನ ಸಾಯಂಕಾಲ 5.30 ಗಂಟೆಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ನನಗೆ ತಿಳಿದಿದ್ದು ಏನೆಂದರೆ ದಿನಾಂಕ 02-10-2016 ರಂದು ರಾತ್ರಿ 1.30 ರಿಂದ 4 ಗಂಟೆ ಸಮಯಕ್ಕೆ ಯಾರೊ ಕಳ್ಳರು ಟವರ ಬಳಿ ಪ್ರವೇಶ ಮಾಡಿ ವಿದ್ಯುತ ಸಂಪರ್ಕ ಜೋಡಣೆ ಮಾಡಿದ ಅಮರರಾಜ 600 AH ಕಂಪನಿಯ 24 ಬ್ಯಾಟರಿ ಸೇಲಗಳು ಕಳ್ಳತನ ಮಾಡಿರುವ ಬಗ್ಗೆ ಗೊತ್ತಾಗಿರುತ್ತದೆ. ಆದ್ದರಿಂದ ರಾತ್ರಿ 7.30 ಗಂಟೆಗೆ ರಟಕಲ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ. ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಸ್ಥಳ ಪರಿಶೀಲನೆ ಮಾಡಲು ಹೋದಾಗ ನನ್ನ ಜೊತೆ ಚಾಸಾ-6 ಮತ್ತು ಚಾಸಾ-4 ರವರು ಇದ್ದರು.

ದಿನಾಂಕ 03-10-2016 ರಂದು ಪೋಲಿಸರ ಪಂಚನಾಮೆ ಮಾಡಲು ಬಂದಾಗ ಪೋಲಿಸರಿಗೆ ಗುನ್ನೆ ಸ್ಥಳವನ್ನು ತೋರಿಸಿದ್ದೇನೆ. ಆ ಕಾಲಕ್ಕೆ ಚಾಸಾ-2 ಮತ್ತು 3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿರುತ್ತಾರೆ. ಈಗ ನೋಡತ್ತಿರುವ ಭಾವಚಿತ್ರಗಳನ್ನು

ಪೋಲಿಸರು ಪಂಚನಾಮೆ ಕಾಲಕ್ಕೆ ಪಡೆದಿದ್ದಾರೆ. ಸದರಿ ಭಾವಚಿತ್ರಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

2017 ರಲ್ಲಿ ಫೀದಾ ಹುಸ್ಸೇನಿ, ಗೋರೆ, ಖಾಲೀದ, ಪಾಷಾರವರು ಕಳ್ಳತನ ಮಾಡಿರುವ ಬಗ್ಗೆ ರಟಕಲ ಪೋಲಿಸರಿಂದ ಗೊತ್ತಾಗಿದೆ. ಕರಗಿಸಿರುವ ಬ್ಯಾಟರಿ ಸೇಲಗಳನ್ನು ಪೋಲಿಸರು ನನಗೆ ತೋರಿಸಿರುತ್ತಾರೆ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**